# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ ನಂ.892/2018** **ಪಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಚಂದ್ರು<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 16-02-2026.** |

**ಮುಂದುವರೆದ ಪಾಟೀ ಸವಾಲುಃ ಶ್ರೀ ವಕೀಲರಿಂದಃ**

ನಾನು ವ್ಯವಸಾಯ ಮತ್ತು ಕ್ಯಾಂಟೀನ್ ಕೆಲಸ ಮಾಡುತ್ತೇನೆ. ನಾನು ಮತ್ತು ಆರೋಪಿ ಒಂದೇ ಊರಿನವರು ಎಂದರೆ ಸರಿ. ನೀವು ಲೇವಾದೇವಿ ವ್ಯವಹಾರವನ್ನು ಮಾಡುತ್ತೇನೆ ಎಂದರೆ ಸರಿ. ನಾನು ಲೇವಾದೇವಿ ವ್ಯವಹಾರ ಮಾಡಲು ಯಾವುದೇ ಲೈಸೆನ್ಸ್ ಅನ್ನು ಪಡೆದುಕೊಂಡಿರುವುದಿಲ್ಲ. ನಾನು ವ್ಯವಸಾಯ ಮಾಡುತ್ತೇನೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಮಾಡುವ ವ್ಯವಹಾರದ ತೆರಿಗೆ ರಸೀದಿಯನ್ನು ಹಾಜರುಪಡಿಸಿರುವುದಿಲ್ಲ. ಆರೋಪಿ ನಾನು ನಗದು ರೂಪದಲ್ಲಿ ಹಣವನ್ನು ನೀಡಿರುತ್ತೇನೆ ಮತ್ತು ನಾನು ಸಂಪಾದನೆ ಮಾಡಿರುವ ದುಡ್ಡನ್ನು ಆರೋಪಿ ನೀಡಿರುತ್ತೇನೆ. ಆರೋಪಿಗೆ ನೀವು 1 ಲಕ್ಷ ರೂಪಾಯಿಗಳನ್ನು ನೀಡಿದ ನಂತರ ಅವರು ನಿಮಗೆ ಒಂದು ಚೆಕ್ ಅನ್ನು ನೀಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಆರೋಪಿ ಯಾವುದೇ 1 ಲಕ್ಷ ರೂಪಾಯಿಗೆ ಸಂಬಂದಪಟ್ಟ ಯಾವುದೇ ಖಾಲಿ ಚೆಕ್ ಅನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. 1 ಲಕ್ಷ ರೂಪಾಯಿಗಳಿಗೆ ನಿಮಗೆ ನೀಡಿದ ನಂತರ ಒಂದು ಖಾಲಿ ಚೆಕ್ ನೀಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಯಾವುದೇ ಖಾಲಿ ಚೆಕ್ ಅನ್ನು ನೀಡಿರುವುದಿಲ್ಲ

ಆದರೆ ಅವರ ಯೂಕೋ ಬ್ಯಾಂಕ್ ಮೂಲಕ ನನಗೆ ಹಣ ಸಂದಾಯ ಆಗಿರುತ್ತದೆ ಎಂದರೆ ಸರಿ.

ನಾನು ಸಂದಾಯ ಆದ ನಂತರ ಮೊದಲು ಕೊಟ್ಟಿರುವ ಚೆಕ್‌ಅನ್ನು ದುರುಪಯೋಗ ಮಾಡಿರುತ್ತೇನೆ ಎಂದರೆ ಸರಿಯಲ್ಲ ಮತ್ತು ನನಗೆ ಕೊಡಬೇಕಾದ ಹಣ ಸಂದಾಯ ಆಗಿರುತ್ತದೆ ಮತ್ತು ಯಾವುದೇ ಹಣ ಬರಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ 50 ಸಾವಿರಕ್ಕಿಂತ ಜಾಸ್ತಿ ಮೊತ್ತ ಇದ್ದಾಗ ಅದು ಕ್ರಾಸ್ ಚೆಕ್ ಆಗಿರಬೇಕಾಗುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಮತ್ತು ನನಗೆ ಯಾವ ತರಹದ ಚೆಕ್ ನೀಡಿದ್ದರು ಎಂಬ ಬಗ್ಗೆ ಹೇಳಲು ಬರುವುದಿಲ್ಲ. ನನಗೆ ಅಷ್ಟು ಹಣ ಕೊಡಲು ಶಕ್ತರಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು ಮುಂದೂಡಲಾಯಿತು.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**